## ಪ್ರಧಾನ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಃ ನ್ಯಾಯಾಲಯ, ಮದ್ದೂರು

**ಸಿಸಿ 1108/2022** **ಡಿಡಬ್ಲ್ಯೂ-1**

| | |
|---|---|
| ಸಾಕ್ಷಿದಾರರ ಹೆಸರು | - ಭಾರತಿ |
| ತಂದೆಯ ಹೆಸರು | - ಜಯರಾಮು |
| ವಯಸ್ಸು | - 47 ವರ್ಷ |
| ಉದ್ಯೋಗ | - ವ್ಯವಸಾಯ |
| ವಾಸಸ್ಥಳ | - ಪಿ ಹಳ್ಳಿ |

ದಿನಾಂಕಃ- 13-02-2026 ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಆರೋಪಿಯ ಪರ ಶ್ರೀ. ವಕೀಲರಿಂದಃ-**

ನನಗೆ ದೂರುದಾರರ ಪರಿಚಯವಿಲ್ಲ. ಪಿ ಹಳ್ಳಿ ಗ್ರಾಮದಲ್ಲಿ ನಾನು, ನನ್ನ ಗಂಡ ಮತ್ತು ನನ್ನ ಮಗಳು 25 ವರ್ಷಗಳಿಂದ ವಾಸಿಸುತ್ತಿದ್ದೇವೆ. ನಮಗೆ ಸ್ವಲ್ಪ ಜಮೀನು ಇದೆ. ಪಕ್ಕದ ಜಮೀನು ಗುತ್ತಿಗೆ ಪಡೆಯಬೇಕಿತ್ತು. ಅದಕ್ಕಾಗಿ ಹಣದ ಅವಶ್ಯಕತೆ ಇತ್ತು. ನಾನು ಮತ್ತು ನನ್ನ ಗಂಡ ಸುಂಡಹಳ್ಳಿ ಗ್ರಾಮದಲ್ಲಿರುವ ನನ್ನ ಸ್ನೇಹಿತೆ ಶೀಲಾ ರವರ ಮನೆಗೆ ದಿ 20-08-2021 ರಲ್ಲಿ ಹೋಗಿದ್ದೇವು. ಸದರಿಯವರಿಂದ 1 ಲಕ್ಷ ಸಾಲ ಪಡೆದಿದ್ದೇವು. ಸದರಿಯವರು ಭದ್ರತೆಗಾಗಿ ಖಾಲಿ ಚೆಕ್ ಮತ್ತು ಖಾಲಿ ಪ್ರನೋಟ್ ಬೇಕು ಎಂದು ಕೇಳಿದ್ದರು. ಆದ್ದರಿಂದ ನಾನು ಖಾಲಿ ಚೆಕ್ ಗೆ ಸಹಿ ಮಾಡಿ ಕೊಟ್ಟಿರುತ್ತೇನೆ ಮತ್ತು ನನ್ನ ಗಂಡ ಖಾಲಿ ಪ್ರನೋಟ್ ಗೆ ಸಹಿ ಮಾಡಿ ಕೊಟ್ಟಿರುತ್ತಾರೆ. ನಂತರ ನಾನು ಹಣ ಪಡೆದು ಗುತ್ತಿಗೆಗೆ ಜಮೀನು ಪಡೆದಿರುತ್ತೇನೆ.

3 ತಿಂಗಳ ನಂತರ ನನ್ನ ತಂಗಿ ಶಾಂತ ತಾನು ಪಡೆದಿದ್ದ 1, 20,000/- ನ್ನು ನವೆಂಬರ್ ತಿಂಗಳಲ್ಲಿ ನನಗೆ ನೀಡಿರುತ್ತಾರೆ. ಸದರಿ ಹಣವನ್ನು ನವೆಂಬರ್ ತಿಂಗಳಲ್ಲಿ ನಾವು ಸಾಲ ಪಡೆದಿದ್ದ ಶೀಲಾ ರವರಿಗೆ ಹಿಂದಿರುಗಿಸುತ್ತೇವೆ. ನಂತರ ಚೆಕ್ ಮತ್ತು ಪ್ರನೋಟ್ ನ್ನು ಹಿಂದಿರುಗಿಸುವಂತೆ ಕೇಳಿರುತ್ತೇನೆ. ಸದರಿಯವರು ಹುಡುಕಿದಂತೆ ಮಾಡಿ ಸಿಕ್ಕಿಲ್ಲ ಕೊಡುವುದಾಗಿ ಹೇಳಿದ್ದರು. ನಂತರ ಊರಿಗೆ ವಾಪಸ್ಸು ಆಗಿರುತ್ತೇವೆ. ಆಗಾಗ ನಾವು ಚೆಕ್ ಮತ್ತು ಪ್ರನೋಟ್ ಹಿಂದಿರುಗಿಸುವಂತೆ ಕೇಳಿದಾಗ ಕೊಡುತ್ತೆವೆಂದು ಭರವಸೆ ನೀಡುತ್ತಿದ್ದರು. ಸದರಿಯವರು ಕೊಡುತ್ತಾರೆಂಬ ನಂಬಿಕೆಯ ಮೇಲೆ ನಾವು ಸುಮ್ಮನಾಗಿರುತ್ತೇವೆ.

ನಂತರ ಫೆಬ್ರವರಿಯಲ್ಲಿ ದೂರುದಾರರಿಂದ ನೋಟೀಸ್ ಬಂದಿರುತ್ತದೆ. ಸದರಿ ನೋಟೀಸ್ ಪಡೆದ ನಂತರ ದೂರುದಾರರಿಂದ ನಾವು ಯಾವುದೇ ಹಣ ಪಡೆದಿಲ್ಲವಲ್ಲ ಎಂದು ಸದರಿ ಶೀಲಾ ರವರನ್ನು ಕೇಳಲು ಸುಂಡಹಳ್ಳಿಗೆ ಹೋಗಿದ್ದೇವು. ನಂತರ ಶೀಲಾ ರವರನ್ನು ವಿಚಾರಿಸಲಾಗಿ ತಾನು ದೂರುದಾರರಿಗೆ ಚೆಕ್ ನೀಡಿರುವುದಾಗಿ 15 ದಿನಗಳ ಕಾಲವಕಾಶ ನೀಡಿದರೆ ವಾಪಸ್ಸು ಕೊಡಿಸುವುದಾಗಿ ಹೇಳಿದ್ದರು. ಸ್ವಲ್ಪ ದಿನಗಳ ನಂತರ ನನ್ನ ಗಂಡನಿಗೆ ಆನ್ ಡಿಮ್ಯಾಂಡ್ ಪ್ರನೋಟ್ ಗೆ ಸಂಬಂಧಿಸಿದಂತೆ ನೋಟೀಸ್ ಬಂದಿರುತ್ತದೆ. ನಂತರ ವಕೀಲರನ್ನು ಭೇಟಿ ಮಾಡಿರುತ್ತೇವೆ. ಸದರಿ ನೋಟೀಸ್ ಗೆ ಪ್ರತಿಯ್ಯುತ್ತರ ನೀಡಿರುತ್ತೇವೆ. ಆದರೆ ನನಗೆ ಬಂದ ನೋಟೀಸ್ ಗೆ ಪ್ರತಿಯ್ಯುತ್ತರ ನೀಡಬೇಕು ಎಂದು ನನಗೆ ಗೊತ್ತಾಗಲಿಲ್ಲ.

ದೂರಿನಲ್ಲಿ ತಿಳಿಸಿರುವ  ಎಲ್ಲಾ ವಿಚಾರಗಳು ಸುಳ್ಳಾಗಿದೆ. ನನಗೆ ದೂರುದಾರರ ಅತ್ತೆಯು ಸಹ ಪರಿಚಯವಿಲ್ಲ. ಆದ್ದರಿಂದ ಪ್ರಕರಣವನ್ನು ವಜಾ ಮಾಡಬೇಕೆಂದು ಕೋರಿಕೊಳ್ಳುತ್ತೇನೆ. ಸಾಕ್ಷಿಯು ತನ್ನ ವಿಚಾರಣೆಗೆ ಅನುಗುಣವಾಗಿ ಪಡಿತರ ಚೀಟಿ ಮತ್ತು ನನ್ನ ಗಂಡ ನೀಡಿದ ಪ್ರತಿಯ್ಯುತ್ತರ ನೋಟೀಸ್‌ನ ಪ್ರತಿಯನ್ನು ಹಾಜರುಪಡಿಸಿದ್ದು, ಅದನ್ನು ನಿಡಿ-1 ಮತ್ತು ನಿಡಿ-2 ಎಂದು ಗುರುತಿಸಲಾಯಿತು.

**Prays time for cross examination granted.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ.)

ಓ ಹೇ  ಕೇ ಸರಿಯಾಗಿದೆಂದು ಒಪ್ಪಿರುತ್ತಾರೆ.

ಪ್ರಧಾನ  ಸಿವಿಲ್  ಮತ್ತು ಜೆಎಂಎಫ್,ಸಿ,
ನ್ಯಾಯಾಧೀಶರು, ಮದ್ದೂರು.

ಸಾಕ್ಷಿಯ ಸಹಿಃ